ಕೃಷಿ ವಿಶ್ವ ವಿದ್ಯಾನಿಲಯ
ಕೃಷಿ ಹವಾಮಾನ ಕ್ಷೇತ್ರ ವಿಭಾಗ (IMD)
ಜಿ.ಕೆ.ವಿ.ಕೆ., ಬೆಂಗಳೂರು-560065
* ಗ್ರಾಮೀಣ ಕೃಷಿ ಹವಾಮಾನ ಸೇವಾ ವರದಿ ಪತ್ರಿಕೆ *

ದಿನಾಂಕ: 17.11.2020

## ಬೆಂಗಳೂರು ನಗರ ಜಿಲ್ಲೆಗೆ ಸೀಮಿತವಾಗಿದೆ.

### ಕಳೆದ ಐದು ದಿನಗಳ ಹವಾಮಾನ ಸಾರಂಶ

| ನಿಯತಾಂಕಗಳು | 13.11.20 | 14.11.20 | 15.11.20 | 16.11.20 | 17.11.20 |
|---|---|---|---|---|---|
| ಮಳೆ (ಮಿ ಮೀ) | 5.0 | 3.2 | 0 | 2.6 | 5.2 |
| ಗರಿಷ್ಠ ಉಷ್ಣಾಂಶ(ಡಿ.ಸೆ. ) | 26.8 | 26.0 | 27.4 | 27.4 | 25.0 |
| ಕನಿಷ್ಠ ಉಷ್ಣಾಂಶ (ಡಿ.ಸೆ. ) | 19.2 | 18.6 | 19.0 | 17.6 | 17.8 |
| ಮೋಡ ( ಪ್ರಮಾಣ) | 4 | 3 | 2 | 4 | 3 |
| ಆರ್ದ್ರತೆ 7.20 ಬೆ (ಶೇ) | 88 | 93 | 93 | 96 | 95 |
| ಆರ್ದ್ರತೆ 2.20 ಮ (ಶೇ) | 71 | 62 | 59 | 68 | -- |
| ಗಾಳಿಯ ವೇಗ (ಕಿ.ಮಿ/ಗಂಟೆಗೆ) | 7.5 | 7.9 | 7.9 | 8.0 | 8.4 |
| ಗಾಳಿಯ ದಿಕ್ಕು ( ಡಿಗ್ರಿ) | 90 | 90 | 90 | 90 | 90 |

### ಈ ವಾರದ ಹವಾಮಾನ ಮುನ್ಸೂಚನೆ (ಭಾರತೀಯ ಹವಾಮಾನ ಇಲಾಖೆ)
(ದಿನಾಂಕ 18-11-2020 ರಿಂದ 22-11-2020 ವರೆಗೆ)

| ನಿಯತಾಂಕಗಳು | 18.11.2020 | 19.11.2020 | 20.11.2020 | 21.11.2020 | 22.11.2020 |
|---|---|---|---|---|---|
| ಮಳೆ (ಮಿ ಮೀ) | 14 | 7 | 1 | 1 | 0 |
| ಗರಿಷ್ಠ ಉಷ್ಣಾಂಶ(ಡಿ.ಸೆ. ) | 27 | 28 | 28 | 29 | 29 |
| ಕನಿಷ್ಠ ಉಷ್ಣಾಂಶ (ಡಿ.ಸೆ. ) | 19 | 19 | 19 | 18 | 18 |
| ಮೋಡ ( ಪ್ರಮಾಣ) | 6 | 6 | 6 | 4 | 2 |
| ಆರ್ದ್ರತೆ 7.20 ಬೆ (ಶೇ) | 93 | 93 | 92 | 92 | 92 |
| ಆರ್ದ್ರತೆ 2.20 ಮ (ಶೇ) | 80 | 80 | 80 | 79 | 79 |
| ಗಾಳಿಯ ವೇಗ (ಕಿ.ಮಿ/ಗಂಟೆಗೆ) | 7 | 6 | 5 | 4 | 4 |
| ಗಾಳಿಯ ದಿಕ್ಕು ( ಡಿಗ್ರಿ) | 112 | 112 | 112 | 108 | 90 |

ಭಾರತೀಯ ಹವಾಮಾನ ಇಲಾಖೆಯ ಪ್ರಕಾರ ಮುಂದಿನ ನಾಲ್ಕೈದು ದಿನಗಳಲ್ಲಿ ಹಗುರದಿಂದ ಸಾದಾರಣ ಮಳೆಯಾಗುವ ಸಾಧ್ಯತೆ ಇದೆ. ದಿನದ ಗರಿಷ್ಠ ಉಷ್ಣಾಂಶ 27.0-29.0 °C ಮತ್ತು ಕನಿಷ್ಠ 18.0-19.0 ° C ಇರುವ ಸಾಧ್ಯತೆ ಇದೆ. ಬೆಳಗಿನ ಆರ್ದ್ರತೆ ಪ್ರಮಾಣ ಶೇ 92-93 % ಇದ್ದು ಮಧ್ಯಾಹ್ನ 79-80 % ಇರುವುದು ಮತ್ತು ಗಾಳಿಯು ಗಂಟೆಗೆ ಸರಾಸರಿ 4-7 ಕಿ.ಮೀ. ವೇಗದಲ್ಲಿ ಬೀಸುವ ಸಂಭವವಿದೆ.

### "ವಿಶಾಖ ಹಿಡಿದರೆ ಪಿಶಾಚಿ ಹಿಡಿದಂತೆ!"

- ವಿಶಾಖ ಮಳೆಯು ಕಾಲವು ನವೆಂಬರ್ ತಿಂಗಳ 06 ರಿಂದ ನವೆಂಬರ್ ತಿಂಗಳ 19 ರ ವರೆಗೆ ಇರುತ್ತದೆ. ಈ ನಕ್ಷತ್ರದ ಪೂರ್ವ ಒಣ ವಲಯದ ಸರಾಸರಿ ಮಳೆಯು 26.7 ಮಿ.ಮೀ. ವರೆಗೆ ಮಳೆಯಾಗುತ್ತದೆ.

## ಕೃಷಿ ಕಾರ್ಯಕ್ರಮಗಳ ಬಗ್ಗೆ ಅನುಸರಿಸಬೇಕಾದ ವಿವರ

| ಬೆಳೆಗಳು | ಹವಾಮಾನ ಆಧಾರಿತ ಕೃಷಿ ಸಲಹೆಗಳು |
|---|---|
| ಸಾಮಾನ್ಯ /ಹಿಂಗಾರು ಬೆಳೆಗಳು | ➢ ಮುಂದಿನ ಎರಡು ದಿನಗಳಲ್ಲಿ ಮೋಡಕವಿದ ವಾತಾವರಣವಿದ್ದು ಹಗುರದಿಂದ ಸಾದಾರಣ ಮಳೆಯಾಗುವುದುದರಿಂದ ಕಟಾವಿಗೆ ಬಂದಿರುವ ಮೆಕ್ಕೆಜೋಳ ಮತ್ತು ರಾಗಿ ಬೆಳೆಯನ್ನು ಕಟಾವು ಮಾಡುವುದನ್ನು ಕೆಲ ದಿನಗಳ ಕಾಲ ಮುಂದೂಡಿ.<br>➢ ಮಳೆಯ ಅವಕಾಶವಿರುವುದರಿಂದ ಕಟಾವು ಮಾಡಿ ಹೊಲದಲ್ಲಿ ಇರುವ ಬೆಳೆಗಳನ್ನು ಸಂರಕ್ಷಿಸಿ.<br>➢ ಕಳೆದ ದಿನಗಳಿಂದ ಮತ್ತು ಮುಂದಿನ ಇನ್ನು ಮೂರು ದಿನಗಳಲ್ಲಿ ಮೋಡಕವಿದ ವಾತಾವರಣವಿದ್ದು ಹಗುರದಿಂದ ಸಾದಾರಣ ಮಳೆಯಾಗುವುದುದರಿಂದ ರಾಗಿ ಬೆಳೆಯಲ್ಲಿ ತೆನೆಯನ್ನು ಕೋಯ್ಲು ಮಾಡುವುದನ್ನು ಮುಂದೂಡಿ ಮತ್ತು ಕಟಾವಾಗಿ ಭೂಮಿಯಲ್ಲಿ ಇರುವ ರಾಗಿ ಬೆಳೆಯನ್ನು ತೇವಾಂಶದಿಂದ ರಕ್ಷಿಸಿ ಇಲ್ಲವಾದರೆ ಮೊಳಕೆ ಒಡೆಯುವ ಸಾದ್ಯತೆ ಹೆಚ್ಚು ಮತ್ತು ರಾಗಿ ಮುಗ್ಗುಲು ಬಂದು ಮುದ್ದೆ ಮಾಡಿದರೆ ವಾಸನೆ ಇರುತ್ತೆ.<br>➢ ಮೋಡಕವಿದ ವಾತಾವರಣ ಮತ್ತು  ಹಗುರದಿಂದ ಸಾದಾರಣ ಮಳೆಯಾಗುವ ಸಂಭವವಿರುವುದರಿಂದ  ಕಟಾವಾದ ಬೆಳೆಗಳನ್ನು ಒಣಗಿಸಲು ಕೆಲ ದಿನಗಳ ಕಾಲ ಮುಂದೂಡಿ.<br>➢ ಹಿಂಗಾರು ಬೆಳೆಗಳನ್ನು ಬಿತ್ತಲು ಇದು ಸೂಕ್ತ ಕಾಲ. ಬಿತ್ತನೆಗೆ ತೇವಾಂಶದ ಆಧಾರದ ಮೇಲೆ ಬಿತ್ತನೆಯನ್ನು ಕೈಗೊಳ್ಳಿ.<br>**ಈ ಕೆಳಗಿನ ಮಧ್ಯಮಾವಧಿ ಮತ್ತು ಕಡಿಮೆ ಅವಧಿ ತಳಿಗಳನ್ನು ಬಿತ್ತನೆ ಮಾಡಲು ಸೂಚಿಸಲಾಗಿದೆ**<br>➢ ಅಲಸಂದೆ : ಟಿ.ವಿ.ಎಕ್ಸ್–944, ಕೆ.ಬಿ.ಸಿ–1, ಅವರೆ–ಎಚ್.ಎ–3 ಮತ್ತು 4,ಸೂರ್ಯಕಾಂತಿ: ಕೆ.ಬಿ.ಎಸ್.ಹೆಚ್–1,41,42,44 ಮತ್ತು 53, ಹುರುಳಿ: ಪಿ.ಎಚ್.ಜಿ–9 ಮತ್ತು ಕೆ.ಬಿ.ಎಚ್–1, ಹುಚ್ಚೆಳ್ಳು ತಳಿಗಳನ್ನು ಬಿತ್ತನೆ/ನಾಟಿ ಮಾಡುವುದು. |
| | ಹೈನುಗಾರಿಕೆ |
| ಪಶುಸಂಗೋಪನೆ | ➢ ಹಿಂಡಿ ಬೂಸವನ್ನು ಮೂರು–ನಾಲ್ಕು ಭಾಗ ಮಾಡಿ ಹಗಲಿನಲ್ಲಿ ಸಂಜೆ ಮತ್ತು ರಾತ್ರಿಯಲ್ಲಿ ತಿನ್ನಿಸುವುದು ಉತ್ತಮ.<br>➢ ಹೆಚ್ಚು ಕರಾವು ಕೊಡುವ ರಾಸುಗಳ ಆಹಾರದಲ್ಲಿ ಕನಿಷ್ಠ ಶೇ. 17 ರಷ್ಟು ನಾರಿನ ಅಂಶವಿರಬೇಕು ( ಎನ್.ಡಿ.ಎಫ್. ಶೇ.22 ರಷ್ಟಿರಬೇಕು.) |
| ಕೋಳಿ ಸಾಕಾಣಿಕಾ | ➢ ಚಳಿಗಾಲವಿರುವುದರಿಂದ ಕೋಳಿ ಸಾಕಾಣಿಕಾ ಕೊಠಡಿಯಲ್ಲಿ ಉಷ್ಣಾಂಶದ ಸ್ಥಿರತೆ ಕಾಪಾಡಲು ವಿದ್ಯುತ್ ಬಲ್ಬ್ ಗಳ ಮುಖಾಂತರ ಸ್ಥಿರತೆಯನ್ನು ಕಾಪಾಡುತ್ತದೆ.<br>➢ ಕೋಳಿ ಸಾಕಾಣಿಕಾ ಕೊಠಡಿಯಲ್ಲಿ ಕಿಟಕಿಯಲ್ಲಿ ಚಳಿಗಾಳಿಯು ಹೆಚ್ಚಾಗಿ ಬೀಸುವುದರಿಂದ ಪರದೆಯನ್ನು ಮುಚ್ಚಿ ಚಳಿಯಿಂದ ರಕ್ಷಿಸಬೇಕು.<br>➢ ಕೋಳಿ ಸಾಕಾಣಿಕಾ ಕೊಠಡಿಯಲ್ಲಿ ಅವಗವಾಗ ಕೋಳಿ ಹಿಕ್ಕೆಯನ್ನು ಸ್ವಚ್ಛಗೊಳಿಸಬೇಕು ಇದರಿಂದ ಅಮ್ಮೊನಿಯ ಶೇಖರಣೆಯಾಗುವುದು ತಪ್ಪುತ್ತದೆ. |
| ರೇಷ್ಮೆ ಸಾಕಾಣಿಕೆ | ➢ ಊಜಿನೊಣದಿಂದ ರೇಷ್ಮೆ ಹುಳುವನ್ನು ಸಂರಕ್ಷಿಸಲು ವಿನ್ಯಾಸಗೊಳಿಸಿದ ಊಜಿ ನಿಯಂತ್ರಣ ಬಲೆ ಬಳಸಬೇಕು.<br>➢ ಊಜಿ ನಿಯಂತ್ರಿಸುವ ರಾಸಾಯನಿಕಗಳಾದ ಊಜಿ ಗುಳಿಗೆ ಶಿಫಾರಸ್ಸು ಮಾಡಿದಂತೆ ಬಳಸಿ ನೀರಿನಲ್ಲಿ ಬೆರೆಸಿ ಕಿಟಕಿ ಬಾಗಿಲುಗಳ ಬಳಿ ಊಜಿ ಹಾರಾಡುವ ಜಾಗದಲ್ಲಿಡಬೇಕು. |

**ನೋಡಲ್ ಅಧಿಕಾರಿ:**
ಕೃಷಿ ಹವಾಮಾನ ವಿಭಾಗ
**ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು**